ಕಾರ್ಮಿಕರ ಸಂಘಗಳೊಂದಿಗೆ ಚರ್ಚೆ ನಡೆಸಿ, ಈ ವಿವಾದವನ್ನು ಐ.ಡಿ. ಆಕ್ಟ್ 1947ರ ಅನುಸಾರ ಇಂಡಸ್ಟ್ರಿಯಲ್ ಟ್ರಿಬ್ಯುನಲ್‌ಗೆ ಒಪ್ಪಿಸಿದೆ.

ಪರಿಣಾಮವಾಗಿ, ದಿ: 25-1-2001 ರಂದು ಆದಳಿತ ವರ್ಗ ಹಾಗೂ ಕಾರ್ಮಿಕ ಸಂಘದ ಮಧ್ಯೆ ಒಂದು ಒಪ್ಪಂದವಾಗಿ ಸದರಿ ವಿಷಯವನ್ನು ಬಗೆಹರಿಸಲಾಗಿದೆ.

ಇ) ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ 1947ರ ಸೆಕ್ಷನ್ 10-ಬಿ ರ ಪ್ರಕಾರ ಅಧಿಕಾರವನ್ನು ಚಲಾಯಿಸಿ, ಈ ಪ್ರಕರಣವನ್ನು ಇಂಡಸ್ಟ್ರಿಯಲ್ ಟ್ರಿಬ್ಯುನಲ್‌ಗೆ ಕಳುಹಿಸುವ ಮುನ್ನ, ಸರ್ಕಾರವು ಸದರಿ ಕಂಪನಿಯ ಪ್ರತಿಯೊಬ್ಬ ಕಾರ್ಮಿಕರಿಗೆ ಮಾಸಿಕ ತಲಾ ರೂ. 700-00ಗಳನ್ನು ಮಧ್ಯಂತರ ಪರಿಹಾರವಾಗಿ ಮಂಜೂರು ಮಾಡಿದೆ. ಹಾಗೂ ಪ್ರಕರಣವನ್ನು ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘದೊಂದಿಗೆ ಬಗೆಹರಿಸಿಕೊಳ್ಳಲಾಗಿದೆ.

ಕೆ.ಎಸ್.ಐ.ಸಿ. ಘಟಕ ಮೈಸೂರು ಇಲ್ಲಿನ ಸಮಸ್ಯೆಗಳು.

1282(1431) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೆ.ಎಸ್.ಐ.ಸಿ. ಮೈಸೂರು ಘಟಕದ ನೌಕರರುಗಳಿಗೆ 5ನೇ ವೇತನ ಆಯೋಗದನ್ವಯ ವೇತನ ನೀಡಲಾಗುತ್ತಿದೆಯೇ;

ಆ) ಇಲ್ಲದಿದ್ದಲ್ಲಿ ಕಾರಣಗಳೇನು?

ಇ) ಇವರುಗಳಿಗೆ 5ನೇ ವೇತನ ಆಯೋಗದನ್ವಯ ಜಾರಿಗೊಳಿಸುವ ಬಗ್ಗೆ ಹಾಗೂ ಈ ಸಂಬಂಧ ಯೂನಿಯನ್‌ನ ಇತರ ಬೇಡಿಕೆಗಳ ಬಗ್ಗೆ ಸರ್ಕಾರದ ನಿಲುವೇನು?

ಈ) ಕೆ.ಎಸ್.ಐ.ಸಿ.ಯ ಘಟಕವೊಂದಾದ ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು ಇಲ್ಲಿನ ನೌಕರರುಗಳಿಗೆ 5ನೇ ವೇತನ ಆಯೋಗದನ್ವಯ ಪರಿಷ್ಕೃತ ವೇತನ ಶ್ರೇಣಿಯನ್ನು ಯಥಾವತ್ತಾಗಿ ವಿಸ್ತರಿಸಿರುವುದಿಲ್ಲ.

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ಪ್ರಸ್ತುತ ಕರ್ನಾಟಕದಲ್ಲಿ ಕೆ.ಎಸ್.ಐ.ಸಿ.ಯನ್ನು ರೋಗಗ್ರಸ್ತ ಉದ್ದಿಮೆಯಾಗಿ ಪರಿಗಣಿಸಿ ಅದರ ಪುನಶ್ಚೇತನಕ್ಕಾಗಿ ಬಿಐಎಫ್‌ಆರ್ ಸಂಸ್ಥೆಗೆ ಮತ್ತು ವಿಐಎಫ್‌ಆರ್ ಸಂಸ್ಥೆಯು ನಿಗಮದ ಪುನಶ್ಚೇತನಕ್ಕಾಗಿ ಯೋಜನೆಯನ್ನು 1995ರಲ್ಲಿ ರೂಪಿಸಿರುತ್ತದೆ. ನಿಗಮದ ಪುನಶ್ಚೇತನ ಪ್ರಸ್ತಾವನೆ ರೂಪು ರೇಷೆಯಂತೆ ನಿಗಮವು ನಷ್ಟದಿಂದ ಹೊರಬಂದು

ಲಾಭದಾಯಕವಾಗುವವರೆಗೆ ವೇತನ ಪರಿಷ್ಕರಣೆಗೆ ನಿರ್ಬಂಧವಿರುತ್ತದೆ. ಪರಿಣಾಮವಾಗಿ ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು ಘಟಕದ ನೌಕರರುಗಳಿಗೆ 5ನೇ ವೇತನ ಆಯೋಗದನ್ವಯ ವೇತನ ಪರಿಷ್ಕರಣೆ ನೀಡಲಾಗಿಲ್ಲ.

ಪ್ರಸ್ತುತ ಕೆ.ಎಸ್.ಐ.ಸಿ.ಯು ಬಿಐಎಫ್ಆರ್‌ನ ಪರಿಶೀಲನೆಯಲ್ಲಿದ್ದು ಪುನಶ್ಚೇತನ ಯೋಜನೆಯಡಿ ಒಪ್ಪಿಕೊಂಡಿರುವಂತೆ ಹೆಚ್ಚುವರಿ ಉತ್ಪಾದಕತೆಯ ಸೌಲಭ್ಯವನ್ನು ಮಾತ್ರ ವಿಸ್ತರಿಸಲು ಅವಕಾಶವಿದ್ದು ಇತರೇ ಯಾವುದೇ ರೀತಿಯ ಸೌಲಭ್ಯಗಳನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ. ನಿಗಮವು ಲಾಭದಾಯಕವಾಗಿ ಬಿಐಎಫ್ಆರ್‌ನ ಪರಧಿಯಿಂದ ಹೊರಬಂದ ನಂತರ ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು ಇಲ್ಲಿನ ನೌಕರರುಗಳಿಗೆ 5ನೇ ವೇತನ ಆಯೋಗದನ್ವಯ ವೇತನ ಹಾಗೂ ಇತರೆ ಸೌಲಭ್ಯಗಳನ್ನು ವಿಸ್ತರಿಸಲು ಹಾಗೂ ಕಾಮಿಕ ಸಂಘಟನೆಗಳ ಬೇಡಿಕೆಗಳ ಬಗ್ಗೆ ಪರಿಶೀಲಿಸಲಾಗುವುದು.

ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ಪೂರಕ ವಾತಾವರಣ.

1283(1432) ಶ್ರೀ ಪಿಜಿ.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಎಷ್ಟು ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದು, ಈ ಸಂಬಂಧವಾಗಿ ಕೈಗಾರಿಕೆಗಳಿಗೆ ಪೂರಕ ವಾತಾವರಣ ಸೃಷ್ಟಿ ಮಾಡುವ ಬಗ್ಗೆ ಇದುವರೆವಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಕಳೆದ 2 ವರ್ಷಗಳಿಂದೀಚೆಗೆ ಹೊಸದಾಗಿ ಪ್ರಾರಂಭವಾಗಿರುವ ಕಾರ್ಖಾನೆಗಳು ಯಾವುವು?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ರಾಜ್ಯದಲ್ಲಿ ರೋಗಗ್ರಸ್ಥ ಮತ್ತು ಮುಚ್ಚಲ್ಪಟ್ಟ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ, ಈ ಕೆಳಗಿನ ಸೌಲಭ್ಯಗಳನ್ನು ಹೊಸ ಕೈಗಾರಿಕಾ ನೀತಿಯಲ್ಲಿ ನೀಡಲಾಗಿದೆ. ಇದಲ್ಲದೇ, ಬೀಜಧನ ಸಹಾಯ ನೀಡುವ ಯೋಜನೆ ಸಹ ಇರುತ್ತದೆ.

1. ಘಟಕ ಮುಚ್ಚಿರುವ ಅವಧಿಗೆ ಕೆ.ಪಿ.ಟಿ.ಸಿ.ಎಲ್.ನವರು ಫಿಕ್ಸೆಡ್ ಡಿಮ್ಯಾಂಡ್ ಚಾರ್ಜಸ್ ಹಾಕುವಂತಿಲ್ಲ.
2. ಬಾಕಿ ಇರುವ ಮಾರಾಟ ತೆರಿಗೆಯನ್ನು ಮತ್ತು ಕೆ.ಪಿ.ಟಿ.ಸಿ.ಎಲ್. ಬಿಲ್ಲನ್ನು 6 ಅರ್ಧ ವಾರ್ಷಿಕ ಆಧಾರದ ಮೇಲೆ ಮರುಪಾವತಿ ಮಾಡುವುದು, ಮತ್ತು ತಿಂಗಳಿಗೆ ಅರ್ಧ ಬಡ್ಡಿ ವಿಧಿಸುವುದು.